## 10. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಣಸೇಕಟ್ಟೆ, ಭದ್ರಾವತಿ

### ಶಾಲೆಯಲ್ಲಿ ಕೈಗೊಂಡ ನಾವೀನ್ಯಯುತ ಚಟುವಟಿಕೆ :–

1. ಗ್ರಾಮೀಣ ಪ್ರದೇಶದಲ್ಲಿ ಓದುವ ಮಕ್ಕಳ ಮನೆಯಲ್ಲಿ ವಿದ್ಯುತ್ ಸಂಪರ್ಕ ಇರಲಿಲ್ಲ. ಭದ್ರಾವತಿ ಲಯನ್ಸ್ ಕ್ಲಬ್ ವತಿಯಿಂದ 29 ಕುಟುಂಬಕ್ಕೂ ಸೋಲಾರ್ ದೀಪ ಕೊಡಿಸಿ, ಮಕ್ಕಳ ಕಲಿಕೆಗೆ ಪ್ರೋತ್ಸಾಹ ನೀಡಲಾಗಿದೆ.
2. ಗ್ರಾಮೀಣ ಪ್ರದೇಶದ ನಮ್ಮ ಕ್ಲಸ್ಟರ್‌ನ ಮಗು ಅನುಷ, ಬ್ಲಡ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಮಗುವಿಗೆ ಕಿದ್ವಾಯ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಮಗು ಈಗ ಆರೋಗ್ಯವಾಗಿ 6ನೇ ತರಗತಿಯಲ್ಲಿ ನಮ್ಮ ಶಾಲೆಯಲ್ಲಿಯೇ ಓದುತ್ತಿದ್ದಾಳೆ.
3. ಕ್ರೀಡಾಕೂಟಕ್ಕಾಗಿ ನಮ್ಮ ಶಾಲಾ ಮಕ್ಕಳಿಗೆ, 35 ಜೊತೆ ಕ್ರೀಡಾ ಸಮವಸ್ತ್ರ ಭದ್ರಾವತಿ ದಾನಿಗಳಿಂದ ಕೊಡುಗೆಯಾಗಿ ಪಡೆಯಲಾಗಿದೆ.
4. ರಾಷ್ಟ್ರೀಯ ಹಬ್ಬಗಳಲ್ಲಿ ಡ್ರಂ ಸೆಟ್ ಅಗತ್ಯವಿದ್ದು ಆ ಡ್ರಂ ಸೆಟ್ಟನ್ನು, ಎಸ್‌ಡಿಎಂಸಿ ಮೂಲಕ ದಾನಿಗಳಿಂದ ಪಡೆಯಲಾಗಿದೆ.
5. ಹೃದ್ರೋಗ, ನರರೋಗ, ಮಕ್ಕಳ ನುರಿತ ವೈದ್ಯರನ್ನು ಶಾಲೆಗೆ ಕರೆಸಿ ಉಚಿತ ತಪಾಸಣೆ ಕಾರ್ಯಕ್ರಮ ಮಾಡಿಸಿ 340 ರೋಗಿಗಳ ಗುರುತು ಪತ್ತೆ ಹಚ್ಚಿ ಚಿಕಿತ್ಸೆ ನೀಡಿಸಲಾಗಿದೆ.
6. ಆಕಾಶವಾಣಿ ಭದ್ರಾವತಿಯಲ್ಲಿ ಮಕ್ಕಳ ಪ್ರತಿಭೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ.
7. ಸೇವಾದಳದ ನಾಯಕತ್ವ ಶಿಬಿರ ನಮ್ಮ ಶಾಲೆಯಲ್ಲಿ ಅಯೋಜನೆ ಮಾಡಿಸಲಾಗಿದೆ.
8. ಪರಿಸರ ಮಿತ್ರ ಪ್ರಶಸ್ತಿ ನಮ್ಮ ಶಾಲೆಗೆ 4 ವರ್ಷಗಳಿಂದಲೂ ಬರುತ್ತಿದೆ. ಧನ್ವಂತರಿ ಶಾಲೆ ನಮ್ಮದು.
9. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗುವಂತೆ ಮಕ್ಕಳನ್ನು ಪ್ರೇರೇಪಿಸಿ ತಯಾರು ಮಾಡಲಾಗಿದೆ.
10. ಸರ್ಕಾರದಿಂದ ಬರುವ 2ನೇ ಜೊತೆ ಸಮವಸ್ತ್ರ ಬರುವ ಮೊದಲೇ ಅನೇಕ ದಾನಿಗಳನ್ನು ಸಂಪರ್ಕಿಸಿ, ಸರ್ಕಾರ ಕೊಡುವ ಬಟ್ಟೆ ಹೊಲಿಸಿ ಕೊಳ್ಳುವ ಮಜೂರಿ, ಶೂ, ಸಾಕ್ಸ್, ಟೈ., ಬೆಲ್ಟ್, 2ನೆ ಜೊತೆ ಸೇವಾದಳದ ಬಟ್ಟೆ ಪಡೆದು ಶಾಲಾ ಮಕ್ಕಳ ಸಂಖ್ಯೆ ಹೆಚ್ಚಳ ಮಾಡಲು ಕ್ರಮವಹಿಸಲಾಗಿದೆ. (ಸ.ಹಿ.ಬಾಲಕರ ಶಾಲೆ, ಹಳೇನಗರ, ಭದ್ರಾವತಿ)

ಈ ವರೆಗೆ 315 ಮಕ್ಕಳನ್ನು ಅವರವರ ಕಾಯಿಲೆಗೆ ತಕ್ಕಂತೆ ಚಿಕಿತ್ಸೆ ಮಾಡಿಸಿರುತ್ತೇವೆ. ಅ ಮಕ್ಕಳೆಲ್ಲ ಆರೋಗ್ಯವಂತವಾಗಿ ವಿದ್ಯಾವಂತರಾಗಿ ಬೆಳೆಯುತ್ತಿರುವುದು ನಮ್ಮ ಸೌಭಾಗ್ಯ. ಶಸ್ತ್ರಚಿಕಿತ್ಸೆಗೆ ಹಣ ಕಡಿಮೆಯಾದಲ್ಲಿ ದಾನಿಗಳಿಂದ ನೆರವು ಪಡೆಯಲಾಗಿದೆ.

6 ರಿಂದ 12 ಲಕ್ಷ ಖರ್ಚು ತಗಲುವ, ಹಾರ್ಮೋನ್ ಸಮಸ್ಯೆಯಿಂದ ಬೆಳವಣಿಗೆ ಕೊರತೆ ಇರುವ ಮಕ್ಕಳಿಗೆ ಮಾಜಿ ಮುಖ್ಯಮಂತ್ರಿ ಅವರ ಮನೆಗೆ ಪೋಷಕರೊಂದಿಗೆ ತೆರಳಿ ಚಿಕಿತ್ಸೆಗೆ ಧನಸಹಾಯ ಪಡೆದು ಚಿಕಿತ್ಸೆ ನೀಡಿಸಲಾಗಿದೆ. ನಮ್ಮೆಲ್ಲಾ ಈ ಕಾರ್ಯಕ್ಕೆ ಇಲಾಖೆ ಅಧಿಕಾರಿಗಳೇ ಸ್ಫೂರ್ತಿ. ಆರ್ಥಿಕವಾಗಿ ಮಾತ್ರ ಸಹಾಯ ಮಾಡಿಲ್ಲ. ಕ್ರೀಡೋಪಕರಣ, ಸಮವಸ್ತ್ರ, ಶೂ, ಸಾಕ್ಸ್, ಟೈ, ಬುಕ್, ಬ್ಯಾಗ್, ಡ್ರಂ ಸೆಟ್, ಹಾರೆ, ಗುದ್ದಲಿ, ಪಿಕಾಸಿ, ಗ್ರೈಂಡರ್, ಇಡ್ಲಿ ಪಾತ್ರೆ, ಕುಕ್ಕರ್, ಫ್ಯಾನ್, ಟೇಬಲ್, ಆಲ್ಮೆರಾ ಇವುಗಳಲ್ಲದೆ, . . . . . .

ಎಷ್ಟೋ ದಾನಿಗಳು ರಕ್ತದಾನವನ್ನು ಮಾಡಿ ಮಕ್ಕಳ ಚಿಕಿತ್ಸೆಗೆ ನೆರವಾಗಿದ್ದಾರೆ. ನೂರಾರು ಮೈಲಿ ದೂರದಲ್ಲಿದ್ದರೂ 1 ರೂ. ಖರ್ಚು ಪಡೆಯದೇ ಮನೋವೈಶಾಲ್ಯತೆಯ ದಾನಿಗಳು ಈ ಸೇವಾ ಕಾರ್ಯಕ್ಕೆ ನೆರವಾಗಿದ್ದಾರೆ.

ನಮ್ಮ ಶಾಲೆಯಲ್ಲಿ 7 ಜನ ಶಿಕ್ಷಕರಿದ್ದು ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಎಲ್ಲಾ ಕಾರ್ಯಗಳಲ್ಲೂ ಕೈ ಜೋಡಿಸಿ ಶಾಲೆಯ ಅಭಿವೃದ್ದಿಗೆ ಕಾರಣರಾಗಿದ್ದಾರೆ.








ಗ್ರೀನ್ ಫೌಂಡೇಶನ್ (ರಿ)
ಪ್ರಕೃತಿ ಸೇವೆಯತ್ತ ನಮ್ಮ ನಡೆ...
ಹಸಿರು ಪರಿಸರ
ಸ್ವಚ್ಛ ಭಾರತ
ಬನ್ನಿ ಕೈ ಜೋಡಿಸಿ